ಪರಮದಯಾಮಯನೂ  ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

# ಸ್ತ್ರೀಯರ ಕುರಿತು ಗಣನೀಯವಾದ ಮೂವತ್ತು  ಹದೀಸ್ ಗಳು


**ಸಂಗ್ರಹ ಮತ್ತು ಕ್ರಮೀಕರಣ**

**ಹಾಫಿಝ್ ಮುಹಮ್ಮದ್ ಹಾಶಿಮ್ ಬಿನ್ ನಿಸಾರ್ ಅಹ್ಮದ್ ಮದನಿ**

(ಹದೀಸ್ ಶಿಕ್ಷಕರು, ಜಾಮಿಯಾ ಮುಹಮ್ಮದಿಯಾ  ಮನ್ಸೂರ, ಬೆಂಗಳೂರು)

**ಕನ್ನಡಕ್ಕೆ ಅನುವಾದ**

**ಮಕ್ಸೂದ್ ಅಹ್ಮದ್ ಉಮ್ರೀ ನಝೀರೀ**

## ಪರಮದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಸರ್ವ ಸ್ತುತಿಗಳು ಸರ್ವಲೋಕಗಳ ಜಗದೊಡೆಯನಾದ ಅಲ್ಲಾಹನಿಗೆ ಮೀಸಲು. ಸತ್ಯವನ್ನು ನೆಲೆ ನಿಲ್ಲಿಸಲು ಹಾಗೂ ಮಿತ್ಯವನ್ನು ಅಳಿಸಲು ಬಂದ ಅಲ್ಲಾಹುವಿನ ಸರ್ವ ಪ್ರವಾದಿ ಹಾಗೂ ಸಂದೇಶವಾಹಕರ ಮೇಲೂ ಅವನ ಸಜ್ಜನ ದಾಸರ ಮೇಲೂ ಅವನ ಅಪಾರವಾದ ಕರುಣೆ, ಶಾಂತಿ ಅನುಗ್ರಹಗಳು ಸದಾ ವರ್ಷಿಸುತ್ತಿರಲಿ.

ಜಗತ್ತಿನಲ್ಲಿ ವೈಯಕ್ತಿಕ ಹಾಗೂ ಸಾಮೂಹಿಕ ಸುಧಾರಣೆಗೆ ಸಜ್ಜನ ಮತ್ತು ಸದ್ಗುಣಶೀಲೆಯರಾದ ಸ್ತ್ರೀಯರ ಅಸ್ತಿತ್ವವು ಬಹುಮುಖ್ಯವಾಗಿದೆ ಮತ್ತು ಇಂತಹ ಸ್ತ್ರೀಯರೇ ಸುಧಾರಣೆಯ ಮೂಲವೂ ಕೇಂದ್ರವೂ ಆಗಿರುವರು ಏಕೆಂದರೆ ಯಾವ ಸಮಾಜದ ಮಹಿಳೆಯರು ಸಜ್ಜನ ಮತ್ತು ಸದ್ಗುಣಶೀಲರಾಗಿರುತ್ತಾರೋ ಆ ಸಮಾಜದ ವರ್ತಮಾನ ಹಾಗೂ ಭವಿಷ್ಯದ ಪೀಳಿಗೆಗಳು ಒಳಿತಿನ ಮೇಲೆ ಸ್ಥಿರವಾಗಿ ನೆಲೆ ನಿಲ್ಲುತ್ತವೆ.

ಸ್ತ್ರೀಯರ ಸುಧಾರಣೆಯ ಮುಖಾಂತರ ಮುಸ್ಲಿಂ ಸಮಾಜವನ್ನು ಒಳಿತಿನಲ್ಲಿ ಸ್ಥಿರವಾಗಿರಿಸಲು ಜೀವನದ ಪ್ರತಿ ಘಟ್ಟದಲ್ಲೂ ಅವರಿಗೆ ಉತ್ತಮ ಬೋಧನೆಗಳನ್ನು ಕುರ್ ಆನ್ ಮತ್ತು ಹದೀಸ್ ನಲ್ಲಿ ನೀಡಲಾಗಿದೆ. ವಾಸ್ತವದಲ್ಲಿ ಯಾವ ಸಮಾಜದ ಮಹಿಳೆಯರು ಸಜ್ಜನ ಮತ್ತು ಸದ್ಗುಣಶೀಲರಾಗಿರುವರೋ ಆ ಸಮಾಜವು ಉತ್ತಮವಾಗಿರುತ್ತದೆ ಮತ್ತು ಯಾವ ಸಮಾಜದ ಮಹಿಳೆಯರು ದುಷ್ಟ ಮತ್ತು ಸ್ವೇಚ್ಛೆಯ ಗುಣ ಸ್ವಭಾವದವರಾಗಿರುವರೋ ಚರಿತ್ರೆಯು ಬಣ್ಣಿಸಿದಂತೆ ಆ ಸಮಾಜವು ನಾಶವಾಗುತ್ತದೆ.

ಉತ್ತಮ ಸಮಾಜದ ಅಸ್ತಿತ್ವ ಮತ್ತು ಉಳಿವಿಗಾಗಿ ಇಸ್ಲಾಂ ಧರ್ಮವು ಕೆಲವು ಬೋಧನೆಗಳನ್ನು ಕ್ರಮಪ್ರಕಾರವಾಗಿ ನೀಡಿದೆ ಉದಾಹರಣೆಗೆ ವಧುವನ್ನು ಆಯ್ಕೆ ಮಾಡುವಾಗ ಸುಶೀಲರಾದ ಧರ್ಮವುಳ್ಳ ಸ್ತ್ರೀಗಳನ್ನು ಆಯ್ಕೆ ಮಾಡಬೇಕೆಂದು ಒತ್ತು ನೀಡಿದೆ. ಅದೇ ಪ್ರಕಾರ ಹೆಣ್ಣು ಮಕ್ಕಳ ಜನನದ ನಂತರ ಅವರಿಗೆ ಇಸ್ಲಾಮೀ ತರಬೇತಿ ನೀಡಿ ಧಾರ್ಮಿಕ ನೆಲೆಯಲ್ಲಿ ಅವರ ಪಾಲನೆ ಪೋಷಣೆ ಮಾಡುವುದರಿಂದ ನರಕದಿಂದ ಮುಕ್ತಿಯ ವಾಗ್ದಾನವನ್ನು ನೀಡಿದೆ. ಅದೇ ರೀತಿ ಸಜ್ಜನ ಶೀಲ ಮಹಿಳೆಯನ್ನು ಜಗತ್ತಿನ ಅತ್ಯುತ್ತಮ ಸರಕು ಎಂದು ಬಣ್ಣಿಸಿದೆ. ಸ್ತ್ರೀಯ ವಿವಿಧ ರೂಪಗಳಾದ ತಾಯಿ, ಹೆಂಡತಿ, ಮಗಳು ಮತ್ತು ಸಹೋದರಿ ಇವರೆಲ್ಲರಿಗೂ ವಿಭಿನ್ನ ಸ್ಥಾನಮಾನಗಳನ್ನು ನೀಡಿ

ಪ್ರತಿಯೊಬ್ಬರಿಗೂ ಪ್ರತ್ಯೇಕವಾದ ಉಪದೇಶಗಳನ್ನು ನೀಡಿದೆ, ಈ ಮೂಲಕ ಪ್ರತೀ ರೂಪದಲ್ಲೂ ಮಹಿಳೆ ಒಳಿತಿನಲ್ಲಿ ಸ್ಥಿರವಾಗಿರಲೆಂದು ಬಯಸಲಾಗಿದೆ.

ಇದಕ್ಕೆ ತದ್ವಿರುದ್ಧವಾಗಿ, ಇಸ್ರಾಈಲರ ನಾಶಕ್ಕೆ ಮಹಿಳೆಯೇ ಕಾರಣವೆಂದು ದೂಷಿಸಿಲಾಗಿದೆ. ಒಬ್ಬಳು ಸ್ತ್ರೀ ತನ್ನ ಮನೆಯಿಂದ ಅನಾವಶ್ಯಕವಾಗಿ ಹೊರಗೆ ಹೋಗುವುದರಿಂದ ಶೈತಾನನು ಆಕೆಯನ್ನು ಹಿಂಬಾಲಿಸುತ್ತಾನೆಂದು ಇಸ್ಲಾಮ್ ಹೇಳುತ್ತದೆ. ಇಸ್ಲಾಮಿನ ಶತ್ರುಗಳು ಗತ ಕಾಲದಿಂದಲೂ ಹಾಗೂ ಪ್ರಸ್ತುತ ಕಾಲಘಟ್ಟದಲ್ಲೂ ಎಲ್ಲಾ ರೀತಿಯ ಸ್ವಾಭಾವಿಕ, ನೈತಿಕ ಆಧೋಗತಿಗೆ ಮಹಿಳೆಯರನ್ನು ಮುಂಚೂಣಿಯಲ್ಲಿಟ್ಟಿರುವರು. ಅಶ್ಲೀಲತೆ ಹಾಗೂ ವಿವಿಧ ಪಾಪಗಳನ್ನು ಬೆಳೆಸಲು ಮತ್ತು ಅವುಗಳನ್ನು ಪಸರಿಸಲು ಮಹಿಳೆಯರನ್ನು ಕಾಮ ಚೇಷ್ಟೆಯ ಸರಕುಗಳನ್ನಾಗಿ ಬಳಸಲಾಗುತ್ತಿದೆ. ಪೈಶಾಚಿಕ ಶಕ್ತಿಗಳು ಹಾಗೂ ಇಸ್ಲಾಮಿನ ಶತ್ರುಗಳು ಪ್ರತ್ಯೇಕವಾಗಿ ಮುಸ್ಲಿಂ ಸಮಾಜವನ್ನು, ಸಾರ್ವತ್ರಿಕವಾಗಿ ಜಗತ್ತನ್ನು ನಾಶಮಾಡಲು ಪ್ರತಿ ಕ್ಷೇತ್ರದಲ್ಲಿ ಮಹಿಳೆಯರನ್ನು ಮುಂದಿಟ್ಟಿರುವರು. ಇಂದಿನ ಪರಿಸ್ಥಿತಿಯು ಎಷ್ಟರ ಮಟ್ಟಿಗೆ ತಲುಪಿದೆಯೆಂದರೆ ಮಹಿಳೆಯರ ಮೂಲಕ ಒಂದಲ್ಲ ಒಂದು ರೀತಿಯಲ್ಲಿ ಇಡೀ ಜಗತ್ತನ್ನು ಪ್ರತ್ಯೇಕವಾಗಿ ಯುವ ಪೀಳಿಗೆಯನ್ನು ನಿರ್ಲಜ್ಜೆ, ಅಶ್ಲೀಲತೆಯ ಕೂಪಕ್ಕೆ ತಳ್ಳಬೇಕೆಂದು ಪೈಶಾಚಿಕ ಮತ್ತು ದುಷ್ಟ ಶಕ್ತಿಗಳು ಪ್ರತಿದಿನವೂ ಇಂತಹ ಉಪಾಯಗಳನ್ನು ಹೂಡುತ್ತಲಿವೆ.

ಪ್ರಸ್ತುತ ಕೇಡುಗಳ ಕಾಲದಲ್ಲಿ ಮುಸ್ಲಿಂ ಸಮಾಜವನ್ನು, ವಿಶೇಷವಾಗಿ ಯುವ ಪೀಳಿಗೆಯನ್ನು ಧರ್ಮ ನಿಷ್ಠೆಯಲ್ಲಿ ಜೀವಂತವಾಗಿಡಲು ಮಹಿಳೆಯರ ಸುಧಾರಣೆ ಅತ್ಯಗತ್ಯ.

ಇದು ಮೂವತ್ತು ಹದೀಸ್ ಗಳ ಕಿರು ಸಂಗ್ರಹವಾಗಿದ್ದು ಇದರಲ್ಲಿ ಮಹಿಳೆಯರ ಸುಧಾರಣೆಗೆ ಸಂಬಂಧಿಸಿದ ಕೆಲವು ಪ್ರವಾದಿ ﷺ ರವರ ಬೋಧನೆಗಳಿವೆ ಅಲ್ಲಾಹು ಈ ಸಣ್ಣ ಪ್ರಯತ್ನವನ್ನು ಸ್ವೀಕರಿಸಲಿ ಹಾಗೂ ಎಲ್ಲರೂ ಇದರ ಪ್ರಯೋಜನವನ್ನು ಪಡೆಯುವಂತಾಗಲಿ. ಅಮೀನ್ .

**ಸಂಗ್ರಹ ಮತ್ತು ಕ್ರಮೀಕರಣ :**

**ಹಾಫಿಝ್ ಮುಹಮ್ಮದ್ ಹಾಶಿಮ್ ಬಿನ್ ನಿಸಾರ್ ಅಹ್ಮದ್ ಉಮ್ರಿ ಮದನಿ**

**ಕನ್ನಡಕ್ಕೆ ಅನುವಾದ:**

**ಮಕ್ಸೂದ್ ಅಹ್ಮದ್ ಉಮ್ರೀ ನಜೀರೀ**

1. ಪ್ರವಾದಿﷺರವರು ಹೇಳಿರುವರು " ಓ ಪುರುಷರೇ ! ನೀವು ಅಲ್ಲಾಹನ ದಾಸಿಯರನ್ನು ಅಲ್ಲಾಹುವಿನ ಭವನಗಳಿಂದ ತಡೆಯದಿರಿ ಮತ್ತು ಅವರ ಮನೆಗಳು ಅವರಿಗೆ ಅತೀ ಉತ್ತಮವಾಗಿವೆ". (ಅಬೂದಾವೂದ್: ಸಹೀಹ್ ಅಲ್ಬಾನಿ)

2. ಪ್ರವಾದಿ ﷺ ರವರು ಹೇಳಿರುವರು: ಖಂಡಿತವಾಗಿಯೂ ಮಹಿಳೆ ಸಂಪೂರ್ಣವಾಗಿ ಮರೆಮಾಚಲ್ಪಡುವವಳಾಗಿದ್ದಾಳೆ . ಅವಳು ಮನೆಯಿಂದ ಹೊರಗೆ ಹೊರಟಾಗ ಶೈತಾನನು ಅವಳನ್ನು ಹಿಂಬಾಲಿಸುತ್ತಾನೆ ಮತ್ತು ಅವಳು ತನ್ನ ಮನೆಯ ಒಳಕೋಣೆಯಲ್ಲಿದ್ದಾಗ ಅಲ್ಲಾಹನಿಗೆ ಅತೀ ನಿಕಟವಾಗಿರುತ್ತಾಳೆ.
(ಇಬ್ನು ಖುಜೈಮಾ, ಇಬ್ನು ಅಬೀ ಶೈಬಾ: ಸಹೀಹ್ ಅಲ್ಬಾನಿ)

3. ಪ್ರವಾದಿ ﷺ ರವರು ಹೇಳಿದರು: ಓರ್ವ ಸ್ತ್ರೀ ಸುಗಂಧ ದ್ರವ್ಯವನ್ನು ಹಚ್ಚಿಕೊಂಡು, ಜನರು ಆಕೆಯ ಪರಿಮಳವನ್ನು ಅನುಭವಿಸಲೆಂದು ಅವರ ಮುಂದಿನಿಂದ ಹಾದು ಹೋದರೆ ಅವಳು ವ್ಯಭಿಚಾರಿಣಿಯಾಗಿದ್ದಾಳೆ. (ಅಬೂ ದಾವೂದ್, ತಿರ್ಮಿದಿ, ನಸಾಈ :ಸಹೀಹ್ ಅಲ್ಬಾನಿ )

4. ಉಮ್ಮು ಸಲಮಾ رضي الله عنها ರವರಿಂದ ವರದಿ ಪ್ರವಾದಿ ﷺ ರವರು ಅವರ ಮನೆಯಲ್ಲಿ ಓರ್ವ ದಾಸಿಯನ್ನು ನೋಡಿದರು ಆಕೆಯ ಮುಖವು ಹಳದಿ ಬಣ್ಣಕ್ಕೆ ತಿರುಗಿತ್ತು, ಆಗ ಪ್ರವಾದಿ ﷺರವರು ಹೇಳಿದರು "ಈ ಹುಡುಗಿಯ ಮೇಲೆ ಷರಈ ಮಂತ್ರ (ಕುರ್ ಆನ್ ಹಾಗೂ ಪ್ರಾರ್ಥನೆಗಳನ್ನು ಪಠಿಸಿ ಊದುವುದು ) ಮಾಡಿಸಿರಿ ಏಕೆಂದರೆ ಈಕೆಗೆ ಕೆಟ್ಟದೃಷ್ಟಿ ತಗಲಿದೆ. (ಬುಖಾರಿ- ಮುಸ್ಲಿಂ).

5. .ಪ್ರವಾದಿ ﷺ ರವರು ಹೇಳಿದರು: ಮಹ್ರಿಮ್( ವಿವಾಹ ನಿಷಿದ್ಧವಾಗಿರುವ ಪುರುಷ) ಇಲ್ಲದೆ ಮಹಿಳೆ ಪ್ರಯಾಣಿಸಬಾರದು, ಆಗ ಓರ್ವ ವ್ಯಕ್ತಿ ಹೇಳಿದನು: ಓ ಅಲ್ಲಾಹನ ಸಂದೇಶವಾಹಕರೇ! ನಾನು ಒಂದು ಯುದ್ಧದಲ್ಲಿ ಜಿಹಾದಿಗಾಗಿ ಹೋಗಲು ಬಯಸುತ್ತೇನೆ ಹಾಗೂ ನನ್ನ ಪತ್ನಿ ಹಜ್ ಯಾತ್ರೆಗೆ ಹೋಗಲು ಬಯಸುತ್ತಾಳೆ ಆಗ ಪ್ರವಾದಿ ﷺ ರವರು ಹೇಳಿದರು "ನೀನು ನಿನ್ನ ಪತ್ನಿಯ ಜೊತೆಗೆ ಹೊರಡು". (ಬುಖಾರಿ - ಮುಸ್ಲಿಂ)

6. ಪ್ರವಾದಿ ﷺ ರವರು ಹೇಳಿದರು: ಓರ್ವ ಮಹಿಳೆ ತನ್ನ ಪತಿಯ ಮನೆಯ ಹೊರತು ಇತರರ ಮನೆಯಲ್ಲಿ ತನ್ನ ಬಟ್ಟೆಗಳನ್ನು ಕಳಚಿದರೆ ಅವಳು ತನ್ನ ಹಾಗೂ ಸರ್ವಶಕ್ತನಾದ ಅಲ್ಲಾಹನ ನಡುವೆ ಇರುವ ಪರದೆಯನ್ನು ಹರಿದು ಹಾಕಿದಂತೆ (ಇಬ್ನು ಮಾಜಾ:ಸಹೀಹ್ ಅಲ್ಬಾನಿ)

7. ಪ್ರವಾದಿ ﷺ ರವರು ಹೇಳಿದರು: ಯಾವೊಬ್ಬ ಮಹಿಳೆ ಅಲ್ಲಾಹನ ಬಳಿ ಪ್ರತಿಫಲವನ್ನು ಆಶಿಸುತ್ತಾ ಮೂರು ಹೆಣ್ಣು ಮಕ್ಕಳಿಗೆ ಜನ್ಮ ನೀಡುತ್ತಾಳೋ ಅವಳು ಸ್ವರ್ಗ ಪ್ರವೇಶಿಸುವಳು ಅವರಲ್ಲಿ ಓರ್ವ ಮಹಿಳೆ ಕೇಳಿದರು: ಎರಡು ಹೆಣ್ಣುಮಕ್ಕಳಿಗೆ ಜನ್ಮ ನೀಡಿದರೆ.? ಪ್ರವಾದಿ ﷺ ರವರು ಹೇಳಿದರು: ಹೌದು! ಎರಡು ಹೆಣ್ಣು ಮಕ್ಕಳಿಗೆ ಜನ್ಮ ನೀಡಿದರೂ ಸಹ. (ಮುಸ್ನದ್ ಅಹ್ಮದ್ : ಸಹೀಹ್ ಅಲ್ಬಾನಿ)

8. ಪ್ರವಾದಿ ﷺ ರವರು ಹೇಳಿದರು: ಓರ್ವ ಮಹಿಳೆ ಇನ್ನೊರ್ವ ಮಹಿಳೆಯನ್ನು ಭೇಟಿಯಾಗಿ ಅವಳ (ಭೇಟಿಯಾದ ಮಹಿಳೆಯ) ಗುಣಲಕ್ಷಣಗಳನ್ನು ತನ್ನ ಪತಿಯ ಬಳಿ ಅವನು ಆ ಮಹಿಳೆಯನ್ನು ನೋಡುತ್ತಿರುವ ಹಾಗೆ ವ್ಯಕ್ತಪಡಿಸಬಾರದು. (ಬುಖಾರಿ)

9. ಅಲ್ಲಾಹನ ಸಂದೇಶ ವಾಹಕರು ﷺ ರವರು ಹೇಳಿದರು: (ನಮಾಝಿನಲ್ಲಿ ಇಮಾಮ್ ನಿಂದ ತಪ್ಪು ಸಂಭವಿಸಿದರೆ) ಪುರುಷರು ಸುಬ್ ಹಾನಲ್ಲಾಹ್ ಎಂದು ಹೇಳಬೇಕು ಹಾಗೂ ಸ್ತ್ರೀಯರು ಚಪ್ಪಾಳೆ ತಟ್ಟಬೇಕು. (ಬುಖಾರಿ - ಮುಸ್ಲಿಂ)

10. ಪ್ರವಾದಿ ﷺ ರವರು ಹೇಳಿರುವರು: ಓರ್ವ ಸ್ತ್ರೀ ವಿನಾ ಕಾರಣ ತನ್ನ ಪತಿಯಿಂದ ವಿಚ್ಛೇದನಕ್ಕೆ ಆಗ್ರಹ ಪಟ್ಟರೆ, ಅವಳ ಮೇಲೆ ಸ್ವರ್ಗದ ಸುಗಂಧವೂ ಕೂಡ ನಿಷಿದ್ಧವಾಗಿದೆ (ಅಬೂ ದಾವೂದ್:ಸಹೀಹ್ ಅಲ್ಬಾನೀ)

11. ಪ್ರವಾದಿ ﷺ ರವರು ಹೇಳಿದರು: ನಾನು ಯಾರಿಗಾದರೂ ಸಾಷ್ಟಾಂಗವೆರಗಲು ಆಜ್ಞಾಪಿಸುತ್ತಿದ್ದರೆ ಖಂಡಿತವಾಗಿಯೂ ತನ್ನ ಪತಿಗೆ ಸಾಷ್ಟಾಂಗವೆರಗಲು ಮಹಿಳೆಗೆ ಆಜ್ಞಾಪಿಸುತ್ತಿದ್ದೆ. (ತಬ್ರಾನಿ: ಸಹೀಹ್ ಅಲ್ಬಾನಿ)

12. ಪ್ರವಾದಿ ﷺ ರವರು ಹೇಳಿದರು: ಒಬ್ಬಳು ಸ್ತ್ರೀ ತನ್ನ ಪತಿಯ ಹಾಸಿಗೆಯಿಂದ ಬೇರ್ಪಟ್ಟು ರಾತ್ರಿ ಕಳೆದರೆ ದೇವದೂತರು ಆ ಮಹಿಳೆ ಹಿಂತಿರುಗುವವರೆಗೂ ಅವಳನ್ನು ಶಪಿಸುತ್ತಲೇ ಇರುತ್ತಾರೆ. (ಬುಖಾರಿ - ಮುಸ್ಲಿಂ)

13. ಪ್ರವಾದಿ ﷺ ರವರು ಹೇಳಿದರು: ನನಗೆ ನರಕವನ್ನು ತೋರಿಸಲಾಯಿತು. ಅದರಲ್ಲಿ ಕೃತಘ್ನತೆ ತೋರುವ ಸ್ತ್ರೀಯರ ಸಂಖ್ಯೆಯು ಅಧಿಕವಾಗಿತ್ತು. ಅವರೇನು ಅಲ್ಲಾಹನಿಗೆ ಕೃತಘ್ನತೆ ತೋರುತ್ತಾರೆಯೇ? ಎಂದು ಕೇಳಲಾಯಿತು, ಪ್ರವಾದಿ ﷺ ರವರು ಉತ್ತರಿಸಿದರು, ಆ ಸ್ತ್ರೀಯರು ತಮ್ಮ ಪತಿಯರಿಗೆ ಕೃತಘ್ನತೆ ತೋರುತ್ತಾರೆ ಹಾಗೂ ಅವರ ಒಳಿತನ್ನು ನಿರಾಕರಿಸುತ್ತಾರೆ, ನೀವು ಅವರಲ್ಲೊಬ್ಬಳೊಂದಿಗೆ ದೀರ್ಘ ಕಾಲದವರೆಗೆ ಉತ್ತಮ ರೀತಿಯಲ್ಲಿ ವರ್ತಿಸಿದರೂ ನಿಮ್ಮಲ್ಲಿ ಸ್ವಲ್ಪ ಕೊರತೆಯನ್ನು ಕಂಡಾಗ: ನಾನು ಇಂದಿನವರೆಗೂ ನಿಮ್ಮಲ್ಲಿ ಯಾವುದೇ ಒಳಿತನ್ನು ಕಂಡಿಲ್ಲ ಎಂದು ಹೇಳುತ್ತಾಳೆ.(ಬುಖಾರಿ-ಮುಸ್ಲಿಂ)

14. ಪ್ರವಾದಿ ﷺ ರವರು ಹೇಳಿದರು: ಹಚ್ಚೆ (tattos) ಹಾಕುವ ಹಾಗೂ ಹಾಕಿಸಿಕೊಳ್ಳುವ ಸ್ತ್ರೀಯರು, ಮುಖದ ಕೂದಲುಗಳನ್ನು ಕೀಳುವ ಹಾಗೂ ಕೀಳಿಸಿಕೊಳ್ಳುವ ಸ್ತ್ರೀಯರು, ಸೌಂದರ್ಯಕ್ಕಾಗಿ ಹಲ್ಲುಗಳ ಮಧ್ಯೆ ವಿಶಾಲತೆಯನ್ನು ಉಂಟುಮಾಡುವ ಸ್ತ್ರೀಯರು ಹಾಗೂ ಅಲ್ಲಾಹನು ಸೃಷ್ಟಿಸಿದ ರೂಪಗಳನ್ನು ವಿಕೃತಗೊಳಿಸುವ ಇವೆಲ್ಲಾ ಸ್ತ್ರೀಯರನ್ನು ಅಲ್ಲಾಹನು ಶಪಿಸಿದ್ದಾನೆ. (ಬುಖಾರಿ -ಮುಸ್ಲಿಂ)

15. ಪ್ರವಾದಿ ಮುಹಮ್ಮದ್ ﷺ ರವರು ಹೇಳಿದರು: "ಸ್ತ್ರೀಯರ ಎರಡು ವರ್ಗಗಳು ನರಕವಾಸಿಗಳಲ್ಲಾಗಿರುವುದು, ಅವರನ್ನು ನಾನು ಎಂದೂ ಕಂಡಿಲ್ಲ, ಅವರು ಬಟ್ಟೆ ಧರಿಸಿಯೂ ನಗ್ನರಾಗಿರುವರು, ಇತರರನ್ನು ತಮ್ಮ ಕಡೆ ಆಕರ್ಷಿಸುವ ಹಾಗೂ ಸ್ವತಃ ಇತರರ ಕಡೆಗೆ ಆಕರ್ಷಿಸಲ್ಪಡುವ ಸ್ತ್ರೀಯರಾಗಿರುವರು, ಅವರ ತಲೆಗಳು ಒಂಟೆಗಳ ಡುಬ್ಬಗಳಂತೆ ಉಬ್ಬಿದ ರೂಪದಲ್ಲಿ ಇರುವುದು, ಅವರು ಸ್ವರ್ಗ ಪ್ರವೇಶಿಸಲಾರರು ಹಾಗೂ ಅದರ ಸುಗಂಧವನ್ನೂ ಆಸ್ವಾದಿಸಲಾರರೂ, ವಾಸ್ತವದಲ್ಲಿ ಅದರ ಸುಗಂಧವು ದೂರ ವಿದೂರದಿಂದ ಬರುತ್ತಿರುವುದು. [ಬುಖಾರಿ -ಮುಸ್ಲಿಂ]

16. ಪ್ರವಾದಿ ﷺ ರವರು ಹೇಳಿದರು: ಇಹ್ರಾಮ್ (ಹಜ್ ಮತ್ತು ಉಮ್ರಾ ಗಳಲ್ಲಿ ಧರಿಸುವ ವಿಶೇಷ ಉಡುಪು)ನಲ್ಲಿರುವ ಮಹಿಳೆ ತನ್ನ ಮುಖವನ್ನು ಮುಚ್ಚಿಕೊಳ್ಳಬಾರದು ಹಾಗೂ ಕೈಗವಸು ಧರಿಸಲೂಬಾರದು. (ಬುಖಾರಿ)

17. ಪ್ರವಾದಿ ﷺ ರವರು ಹೇಳಿದರು: ರೇಷ್ಮೆ ಬಟ್ಟೆ ಮತ್ತು ಚಿನ್ನವನ್ನು ನನ್ನ ಸಮುದಾಯದ ಪುರುಷರ ಮೇಲೆ ನಿಷಿದ್ಧಗೊಳಿಸಲಾಗಿದೆ ಹಾಗೂ ಅವುಗಳನ್ನು ಅವರ ಸ್ತ್ರೀಯರಿಗೆ ಧರ್ಮಸಮ್ಮತಗೊಳಿಸಲಾಗಿದೆ. (ತಿರ್ಮಿದಿ: ಸಹೀಹ್ ಅಲ್ಬಾನಿ)

18. ಸ್ತ್ರೀಯರ ವೇಷ ಧರಿಸುವ ಪುರುಷರನ್ನು ಮತ್ತು ಪುರುಷರ ವೇಷ ಧರಿಸುವ ಸ್ತ್ರೀಯರನ್ನು ಪ್ರವಾದಿ ﷺ ರವರು ಶಪಿಸಿದ್ದಾರೆ.(ಬುಖಾರಿ)

19. ಪ್ರವಾದಿ ﷺ ರವರು ಹೇಳಿರುವರು: ಓರ್ವ ಮಹಿಳೆ ಐದು ಹೊತ್ತಿನ ನಮಾಝನ್ನು ಕ್ಲಪ್ತ ಸಮಯಕ್ಕೆ ನಿರ್ವಹಿಸಿ, ರಮದಾನಿನಲ್ಲಿ ಉಪವಾಸವನ್ನು ಆಚರಿಸಿ, ತನ್ನ ಗುಪ್ತಾಂಗಗಳನ್ನು ಸಂರಕ್ಷಿಸಿ ಹಾಗೂ ತನ್ನ ಪತಿಗೆ ವಿಧೇಯಳಾಗಿ ಅವನನ್ನು ಅನುಸರಿಸುವುದಾದರೆ ಪರಲೋಕದಂದು ಅವಳೊಂದಿಗೆ ನೀನಿಷ್ಟಪಡುವ ಸ್ವರ್ಗದ ದ್ವಾರದಿಂದ ಪ್ರವೇಶಿಸು ಎಂದು ಹೇಳಲಾಗುವುದು. (ಇಬ್ನು ಹಿಬ್ಬಾನ್ :ಸಹೀಹ್ ಅಲ್ಬಾನಿ)

20. ಪ್ರವಾದಿ ﷺ ರವರು ಹೇಳಿದರು: ಓ ಮಹಿಳೆಯರೇ! ನೀವು ಅಲ್ಲಾಹನ ಕೀರ್ತನೆ, ಅವನ ಸ್ಮರಣೆ ಹಾಗೂ ಅವನ ಪಾವಿತ್ರತೆ ಕೊಂಡಾಡುವುದನ್ನು ಬಿಗಿಯಾಗಿ ಹಿಡಿದುಕೊಳ್ಳಿ ಮತ್ತು ನಿಮ್ಮ ಬೆರಳುಗಳಿಂದ ಅಲ್ಲಾಹನ ತಸ್ಬೀಹ್ (ಪಾವಿತ್ರತೆ) ಎಣಿಸಿರಿ ಏಕೆಂದರೆ ಪುನರುತ್ಥಾನ ದಿನದಂದು ಬೆರಳುಗಳ ತುದಿಗಳೊಂದಿಗೆ ಪ್ರಶ್ನಿಸಲಾಗುವುದು ಹಾಗೂ ಅವುಗಳೂ ಕೂಡ ಸಾಕ್ಷವಹಿಸುವುದು ಮತ್ತು ಅಲ್ಲಾಹನ ಸ್ಮರಣೆಯನ್ನು ನಿರ್ಲಕ್ಷಿಸಬೇಡಿ ಇಲ್ಲದಿದ್ದರೆ ನೀವು ಅಲ್ಲಾಹುವಿನ ಕರುಣೆಯಿಂದ ವಂಚಿತರಾಗುವಿರಿ. (ತಿರ್ಮಿದಿ, ಸಹೀಹ್ ಅಲ್ಬಾನಿ)

21. ಪ್ರವಾದಿ ﷺ ರವರು ಹೇಳಿದರು: ಓರ್ವ ಸ್ತ್ರೀ ರಾತ್ರಿ ನಿದ್ರೆಯಿಂದ ಎದ್ದು ನಮಾಝ್ ನಿರ್ವಹಿಸಿ ತನ್ನ ಪತಿಯನ್ನು ನಮಾಝಿಗಾಗಿ ಎಚ್ಚರಗೊಳಿಸುತ್ತಾಳೆ, ಅವನು ಎಚ್ಚರಗೊಳ್ಳಲು

ನಿರಾಕರಿಸಿದರೆ ಅವನ ಮುಖದ ಮೇಲೆ ನೀರನ್ನು ಚಿಮ್ಮುತ್ತಾಳೆ, ಅಲ್ಲಾಹು ಇಂತಹ ಸ್ತ್ರೀಯ ಮೇಲೆ ಕರುಣೆ ತೋರಲಿ. (ಅಬೂ ದಾವೂದ್, ಸಹೀಹ್ ಅಲ್ಬಾನಿ)

22. ಪ್ರವಾದಿ ﷺ ರವರೊಂದಿಗೆ ಹೇಳಲಾಯಿತು: ಓ ಅಲ್ಲಾಹನ ಸಂದೇಶವಾಹಕರೇ ಓರ್ವ ಸ್ತ್ರೀ ರಾತ್ರಿ ತಹಜ್ಜುದ್ ನಮಾಝ್ ನಿರ್ವಹಿಸಿ ಹಗಲಿನಲ್ಲಿ ಉಪವಾಸ ಆಚರಿಸುತ್ತಾಳೆ ಹಾಗೂ ಹಲವಾರು ಸತ್ಕಾರ್ಯ, ದಾನ ಧರ್ಮವನ್ನು ಮಾಡುತ್ತಾಳೆ, ಆದರೆ ಅವಳು ತನ್ನ ನೆರೆಹೊರೆಯವರಿಗೆ ತನ್ನ ನಾಲಿಗೆಯ ಮೂಲಕ ತೊಂದರೆಯನ್ನು ಕೊಡುತ್ತಾಳೆ ಆಗ ಪ್ರವಾದಿ ﷺ ರವರು ಹೇಳಿದರು: ಇವಳಲ್ಲಿ ಯಾವುದೇ ಒಳಿತಿಲ್ಲ, ಇವಳು ನರವಾಸಿಗಳಲ್ಲಾಗಿದ್ದಾಳೆ. ಇನ್ನೋರ್ವ ಮಹಿಳೆಯು ಕೇವಲ ಕಡ್ಡಾಯ ನಮಾಝ್ ಗಳನ್ನು ಮಾತ್ರ ನಿರ್ವಹಿಸುತ್ತಾಳೆ ಮತ್ತು ಅಲ್ಪ ವಸ್ತುಗಳನ್ನು ದಾನ ಧರ್ಮ ಮಾಡುತ್ತಾಳೆ ಆದರೆ ಯಾರಿಗೂ ತೊಂದರೆ ನೀಡುವುದಿಲ್ಲ, ಆಗ ಪ್ರವಾದಿ ﷺ ರವರು ಹೇಳಿದರು: ಅವಳು ಸ್ವರ್ಗವಾಸಿಗಳಲ್ಲಾಗಿದ್ದಾಳೆ. (ಅಹ್ಮದ್ - ಬುಖಾರಿ)

23. ಪ್ರವಾದಿ ﷺ ರವರು ಹೇಳಿದರು: ಪ್ರಾಯಪೂರ್ತಿಯಾದ ಸ್ತ್ರೀಯ ನಮಾಝ್ ಶಿರವಸ್ತ್ರವಿಲ್ಲದೆ ಸ್ವೀಕರಿಸಲಾಗುವುದಿಲ್ಲ. (ತಿರ್ಮಿದಿ, ಸಹೀಹ್ ಅಲ್ಬಾನಿ)

24. ಪ್ರವಾದಿ ﷺ ರವರು ಹೇಳಿದರು: ಗೋಳಾಡಿ ಶೋಕ ಆಚರಿಸುವ ಸ್ತ್ರೀ ತನ್ನ ಮರಣದ ಮುಂಚೆ ಪಶ್ಚಾತ್ತಾಪ ಪಡದಿದ್ದರೆ ಪುನರುತ್ಥಾನ ದಿನದಂದು ಅವಳ ಮೇಲೆ ಡಾಮರಿನ ಉಡುಪು ಮತ್ತು ಕಜ್ಜಿಯ ಬಟ್ಟೆಗಳ ಕವಚವಿರುವ ಸ್ಥಿತಿಯಲ್ಲಿ ಎಬ್ಬಿಸಲಾಗುವಳು. (ಮುಸ್ಲಿಂ)

25. ಪ್ರವಾದಿ ﷺ ರವರು ಹೇಳಿದರು: ಓರ್ವ ಮಹಿಳೆ ಸುಗಂಧ ದ್ರವ್ಯವನ್ನು ಹಚ್ಚಿಕೊಂಡು ಮಸೀದಿಗೆ ಹೋದರೆ ಅವಳು ಸ್ನಾನ ಮಾಡುವವರೆಗೆ ಅವಳ ನಮಾಝ್ ಸ್ವೀಕರಿಸಲಾಗುವುದಿಲ್ಲ. (ಇಬ್ನು ಮಾಜಾ, ಸಹೀಹ್ ಅಲ್ಬಾನಿ)

26. ಪ್ರವಾದಿ ﷺ ರವರು ಹೇಳಿದರು: ಯಾವುದೇ ಪುರುಷ ಅನ್ಯ ಸ್ತ್ರೀಯನ್ನು ಎಂದಿಗೂ ಏಕಾಂತದಲ್ಲಿ ಭೇಟಿಯಾಗಬಾರದು ಮತ್ತು ಯಾವುದೇ ಮಹಿಳೆ ಮಹ್ರಿಮ್ (ವಿವಾಹ ನಿಷಿದ್ಧವಾದ ಪುರುಷ) ಇಲ್ಲದೆ ಪ್ರಯಾಣಿಸಬಾರದು (ಬುಖಾರಿ-ಮುಸ್ಲಿಂ)

27. ಪ್ರವಾದಿ ﷺ ರವರು ಹೇಳಿದರು: ಓ ಮಹಿಳೆಯರ ಸಮೂಹವೇ! ನೀವು ದಾನ ಧರ್ಮ ಮಾಡಿರಿ, ಅದು ನಿಮ್ಮ ಒಡವೆ ಮತ್ತು ಆಭರಣಗಳ ಮೂಲಕವಾದರೂ ಸರಿ. (ಬುಖಾರಿ-ಮುಸ್ಲಿಂ)

28. ಪ್ರವಾದಿ ﷺ ರವರು ಹೇಳಿದರು: ಗೋರಿಗಳನ್ನು ಹೆಚ್ಚಾಗಿ ಸಂದರ್ಶಿಸುವ ಮಹಿಳೆಯರನ್ನು ಅಲ್ಲಾಹನು ಶಪಿಸಿದ್ದಾನೆ. (ತಿರ್ಮಿದಿ-ಸಹೀಹ್ ಅಲ್ಬಾನಿ)

29. ಪ್ರವಾದಿ ﷺ ರವರು ಹೇಳಿದರು: ಪೋಷಕ/ ರಕ್ಷಕನ ಅನುಮತಿಯಿಲ್ಲದೆ (ನಿಕಟ ಸಂಬಂಧಿ) ಯಾವುದೇ ಸ್ತ್ರೀ ವಿವಾಹವಾದರೆ, ಅವಳ ವಿವಾಹವು ಅನೂರ್ಜಿತವಾಗಿದೆ, ಅವಳ ವಿವಾಹವು ಅನೂರ್ಜಿತವಾಗಿದೆ, ಅವಳ ವಿವಾಹವು ಅನೂರ್ಜಿತವಾಗಿದೆ. (ತಿರ್ಮಿದಿ-ಸಹೀಹ್ ಅಲ್ಬಾನಿ)

30. ಪ್ರವಾದಿ ﷺ ರವರು ಹೇಳಿದರು: ಅಲ್ಲಾ ಹು ಮತ್ತು ಅಂತಿಮ ದಿನದ ಮೇಲೆ ವಿಶ್ವಾಸವಿಡುವ ಓರ್ವ ಸ್ತ್ರೀ ಮೂರು ದಿನಗಳಿಗಿಂತ ಹೆಚ್ಚು ಯಾವುದೇ ವ್ಯಕ್ತಿಯ ಮರಣದ ಪರವಾಗಿ ಶೋಕಾಚರಿಸುವುದು ಸಮ್ಮತಾರ್ಹವಲ್ಲ. ಆದರೆ ತನ್ನ ಪತಿಯ ಸಾವಿಗೆ ಅವಳು ನಾಲ್ಕು ತಿಂಗಳು ಹತ್ತು ದಿನಗಳ ಕಾಲ ಶೋಕಾಚರಿಸಬಹುದು. (ಬುಖಾರಿ -ಮುಸ್ಲಿಂ)